# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಗಳವರ ನ್ಯಾಯಾಲಯ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

## ಓ ಎಸ್ ನಂ. 41/2016

ಪಿ ಡಬ್ಲ್ಯೂ: 1

ದಿನಾಂಕ 28-01-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು

ಮುಖ್ಯ ವಿಚಾರಣೆಃ ವಾದಿ ಪರಃ ಶ್ರೀ ಡಿ ಸಿ ವಕೀಲರಿಂದಃ

ನಾನು ದಾವೆಯಲ್ಲಿ ಮೊದಲನೇ ವಾದಿ ಇರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಹೇಳಿಕೆ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯವೆಲ್ಲಾ ಸತ್ಯವಾಗಿರುತ್ತದೆ. ಅದನ್ನು ಓದಿ ನೋಡಿ ಸಹಿ ಮಾಡಿರುತ್ತೇನೆ. ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಗುರುತಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಪ್ರತಿವಾದಿಗಳು ನಮಗೆ ಬರೆದುಕೊಟ್ಟಿರುವ ಕ್ರಯ ಒಪ್ಪಂದದ ಕರಾರು ಪತ್ರವನ್ನು ನಿಪಿ-1 ಮತ್ತು ಸದರಿ ದಾಖಲೆಯಲ್ಲಿರುವ 1 ನೇ ಪ್ರತಿವಾದಿಯ ಸಹಿಯನ್ನು ನಿಪಿ-1(ಎ), (1 ನೇ ಪ್ರತಿವಾದಿಯ ತಕರಾರಿಗೆ ಒಳಪಟ್ಟು ಅವರ ಸಹಿಯನ್ನು ಗುರುತಿಸಲಾಗಿದೆ). ದಾವಾ ಆಸ್ತಿ ಮತ್ತು ಇತರೆ ಆಸ್ತಿಗಳನ್ನು 1 ನೇ ಪ್ರತಿವಾದಿ ಖರೀದಿಸಿರುವ ಬಗ್ಗೆ ಕ್ರಯಪತ್ರದ ದೃಡೀಕೃತ ನಕಲನ್ನು ನಿಪಿ-2, ದಾವಾ ಆಸ್ತಿಗೆ ಸಂಬಂದಪಟ್ಟ ಅಸೆಸ್ಮೆಂಟ್ ನಿಪಿ-3, ಲೀಗಲ್ ನೋಟೀಸನ್ನು ನಿಪಿ-4, ಜವಾಬ್ ನೋಟಿಸನ್ನು ನಿಪಿ-5, ಅಂಚೆ ಸ್ವೀಕೃತಿಯನ್ನು ನಿಪಿ-6, ದಾವಾ ಆಸ್ತಿಯ ಸಂಬಂದ ನನಗೆ ಕರಾರುಪತ್ರವಾದ ನಂತರ 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು 2 ರಿಂದ 4 ನೇ

ಪ್ರತಿವಾದಿಗೆ ಮಾರಾಟ ಮಾಡಿರುವ ಕ್ರಯಪತ್ರವನ್ನು ನಿಪಿ-7, ಆನಂತರ 2 ರಿಂದ 4 ನೇ ಪ್ರತಿವಾದಿಗಳಿಗೆ ಖಾತೆ ಬದಲಾಗಿರುವ ಬಗ್ಗೆ ಆಸ್ತಿ ತೆರಿಗೆ ದಾಖಲೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

<u>ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಕೆ ಎಸ್ ಆರ್ ವಕೀಲರಿಂದಃ</u>

ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.